ಉದಾಹರಣೆ ಬೇಕಿದ್ರೆ ಅಗಸ್ತ್ಯರು
ಹೀಗಿರಬಹುದೆಂತ ಅನುಕೊಳ್ಳುವೆನು
ಅಂಥ ಪುರಾತನ ಅಸಡ್ಡಾಳ ಗಡ್ಡ
ತಲೆಕೆಳಗಾಗಿ ಬೆಳೆವಂಥ ಗುಡ್ಡ
ಟಿನೊಪಾಲ್ ಹಾಕಿ ತೊಳೆದಂತೆ ಬಿಳುಪು
ಕಣ್ಣುಗಳಲ್ಲೂ ಬಲ್ಬಿನ ಹೊಳಪು
ತನ್ನ ಕೆಲಸದಲಿ ಅಗಾಧ ಭಕ್ತಿ
ಜನಸೇವೇನೇ ಜೀವನ್ಮುಕ್ತಿ

ಎದುರು ರಸ್ತೆಯಲಿ ಭರದಿಂದ ಜೀವನ
ಚಕ್ರ ಚಲಿಸುತ್ತಿದೆ ಪ್ರತಿಯೊಂದೂ
ದಿನ
ಅಂಗಡಿ ಕೆಫೆಗಳಲಿ ಹಣದ ಗಂಟು
ಕೀಟನಾಶಕಗಳಿಗೂ ಬೇಡಿಕೆಯುಂಟು
ಎಲ್ಲಾ ನೋಡಿಕೊಳ್ತಾನೆ ಅಲ್ಲಾ ಎಂದು
ಸಾಬಿಯ ವಿಶ್ವಾಸ ಅಂದೂ ಇಂದೂ

ನಗರ ಪಾಲಿಕೆಯ ದೀಪಗಳುರಿದು
ಅವುಗಳಿಂದ ಸಾಕಷ್ಟು ಬೆಳಕೂ
ಸುರಿದು
ಇಡೀ ಪೇಟೆಯೇ ಜಗ ಮಗಿಸುವುದು
ಸೈಕಲಿಗೂ ಅದರ ಛವಿ ತಗಲುವುದು!

ಎಲ್ಲೋ ಒಂದೆಡೆ ಒಬ್ಬಳು ಹೆಣ್ಣು
ಹೆರಳನು ಕಚ್ಚಿದ ಗಿಲೀಟಿನ ಪಿನ್ನು
ಯಾರೋ ಒಬ್ಬನ ಅಂಗಿಯ ತಬ್ಬಿ
ರಾರಾಜಿಸುತಿರುವ ಪ್ಲಾಸ್ಟಿಕ್ ಗುಬ್ಬಿ
ಇನ್ನೆಲ್ಲೋ ಮುಂ
ಜಾನೆಗೆ ಬಿರಿದು
ಪರಿಮಳ ಬೀರುವ ಗುಲಾಬಿಯ ಜಾದು
ಇವನಿಗು ಅವರಿಗು ಯಾತರ ಥಳಕು
ನೀಗುತಿರದೇ ಜನ್ಮಾಂತರ ಫರಕು

